ಪ್ರಜಾವಾಣಿ

# ಬ್ಯಾಸ್ಕೆಟ್‌ಬಾಲ್: ಜೈನ್ ರೆಸಿಡೆನ್ಸಿಯಲ್ ಶಾಲೆಗೆ ಜಯ

ಬೆಂಗಳೂರು: ಜೈನ್ ಇಂಟರ್‌ನ್ಯಾಷನಲ್ ರೆಸಿಡೆನ್ಸಿಯಲ್ ಶಾಲೆ ತಂಡ ರೋಟರಿ ಇಂದಿರಾನಗರ ವತಿಯಿಂದ ಸೋಮವಾರ ಇಲ್ಲಿ ಆರಂಭವಾದ 16 ವರ್ಷದೊಳಗಿನವರ ಅಂತರ ಶಾಲೆ ಬ್ಯಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಶುಭಾರಂಭ ಮಾಡಿದೆ.

ಬಾಲಕರ ವಿಭಾಗದ ಪಂದ್ಯದಲ್ಲಿ ಜೈನ್ ಇಂಟರ್‌ನ್ಯಾಷನಲ್ ಶಾಲೆ 26–18ರಲ್ಲಿ ಹಿಮಾನ್ಸು ಶಾಲೆಯನ್ನು ಮಣಿಸಿತು. ಇತರ ಪಂದ್ಯಗಳಲ್ಲಿ ಲಿಟ್ಲ್ ಫ್ಲವರ್ ಪಬ್ಲಿಕ್ ಶಾಲೆ 35–30ರಲ್ಲಿ ಕ್ರೈಸ್ಟ್ ಪ್ರೌಢ ಶಾಲೆ ವಿರುದ್ಧವೂ, ನ್ಯಾಷನಲ್ ಹಿಲ್ ವ್ಯೂ ಪಬ್ಲಿಕ್ ಶಾಲೆ 30–28ರಲ್ಲಿ ಟಿಐಎಸ್‌ಬಿ ಮೇಲೂ, ಕೋರಮಂಗಲದ ನ್ಯಾಷನಲ್ ಪಬ್ಲಿಕ್ ಶಾಲೆ 22–10ರಲ್ಲಿ ಸೇಂಟ್ ಜೋಸೆಫ್ಸ್ ಯುರೋಪಿಯನ್ ಪ್ರೌಢ ಶಾಲೆ ಎದುರೂ ಗೆಲುವು ದಾಖಲಿಸಿದವು.

ಬಾಲಕಿಯರ ವಿಭಾಗದ ಪಂದ್ಯಗಳಲ್ಲಿ ಲಿಟ್ಲ್ ಫ್ಲವರ್ ಪಬ್ಲಿಕ್ ಶಾಲೆ 20–18 ರಲ್ಲಿ ನ್ಯಾಷನಲ್ ಹಿಲ್ ವ್ಯೂ ಪಬ್ಲಿಕ್ ಶಾಲೆ ವಿರುದ್ಧವೂ, ಕ್ಲನಿ ಕಾನ್ವೆಂಟ್ 10–09 ರಲ್ಲಿ ಡಿಪಿಎಸ್ ಮೇಲೂ, ಕೋರಮಂಗಲದ ನ್ಯಾಷನಲ್ ಪಬ್ಲಿಕ್ ಶಾಲೆ 25–17 ರಲ್ಲಿ ಟಿಐಎಸ್‌ಬಿ ಎದುರೂ ಜಯಗಳಿಸಿವೆ.